


# 5 ಎಷ್ಟು?

0124CH05

## ತಾತನೊಂದಿಗೆ ವಿಹಾರ






ಮಕ್ಕಳು ಈ ಚಿತ್ರ ನೋಡಿ (ಪಾರ್ಕ್) ಉದ್ಯಾನವನದಲ್ಲಿ ಏನೇನು ಚಟುವಟಿಕೆಗಳು ನಡೆಯುತ್ತದೆ ಎಂದು ಹಂಚಿಕೊಳ್ಳಲಿ. ಉದಾಹರಣೆಗೆ: ಮೊದಲ ಚಿತ್ರದಲ್ಲಿ ಎಷ್ಟು ಮಕ್ಕಳು ಆಡುತ್ತಿದ್ದಾರೆ? ಅವರೊಂದಿಗೆ ಬಂದು ಸೇರಿಕೊಂಡ ಜನರು ಎಷ್ಟು? ತಾತನೊಂದಿಗೆ ಸಮಯ ಕಳೆಯುವ ಮಹತ್ವದ ಬಗ್ಗೆ ಮಕ್ಕಳು ಚರ್ಚಿಸಲಿ ಅವರಿಗೆ ಹೇಗೆ ಗೌರವ ತೋರಿಸಬೇಕು ಎಂದು ಚರ್ಚಿಸಿ.




## ಒಟ್ಟು ಎಷ್ಟೆಂದು ಹೇಳಿ ಬಿಟ್ಟಿರುವ ಜಾಗ ತುಂಬಿ




**4** ಮಕ್ಕಳು ಮತ್ತು **2** ಮಕ್ಕಳು ಒಟ್ಟು ಸೇರಿದರೆ ___ ಮಕ್ಕಳು

4 + 2 = ☐



**3** ಬುಗುರಿ ಮತ್ತು **1** ಬುಗುರಿ ಒಟ್ಟು ಸೇರಿದರೆ _____ ಬುಗುರಿಗಳು

3 + 1 = ☐



**3** ಇರುವೆ ಮತ್ತು **2** ಇರುವೆ ಒಟ್ಟು ಸೇರಿದರೆ _____ ಇರುವೆಗಳು

3 + 2 = ☐



**4** ಸೀಸದ ಕಡ್ಡಿ **3** ಸೀಸದ ಕಡ್ಡಿ ಒಟ್ಟು ಸೇರಿದರೆ ____ ಸೀಸದ ಕಡ್ಡಿಗಳು


4 + 3 = ☐

ಅನೇಕ ಬೌದ್ಧಿಕ ವಸ್ತುಗಳನ್ನು ಎಣಿಸಿ ಕೂಡಲು ಮಕ್ಕಳಿಗೆ ಸಾಕಷ್ಟು ಅವಕಾಶ ಕೊಡಿ. ಎರಡು ಗುಂಪುಗಳನ್ನು ಸೇರಿಸಿ ಒಟ್ಟು ಸಂಖ್ಯೆ ಹೇಳಲು ಪ್ರೋತ್ಸಾಹಿಸಿ. (ಅಗ್ರಿಗೇಶನ್) ಇದನ್ನು ಒಟ್ಟು ಕೂಡಿಸುವಿಕೆ ಎನ್ನುತ್ತಾರೆ. ಈಗಾಗಲೇ ಇರುವ ಗುಂಪಿಗೆ ಹೆಚ್ಚು ವಸ್ತುಗಳನ್ನು ಸೇರಿಸುವುದನ್ನು ಕಲಿಯಲಿ (ಆಗುಮೆಂಟೇಶನ್) ಇದನ್ನು ವರ್ಧನೆ ಎನ್ನುತ್ತಾರೆ. ಈ ಎರಡು ವಿಧಾನಗಳ ಸಮಸ್ಯೆಗಳನ್ನು ಅಭ್ಯಾಸಗಳಲ್ಲಿ ಮಾಡಬೇಕು.



© NCERT not to be republished


## ಕೂಡಿ ಚಿತ್ರಿಸಿ



______________

**6** ಚೆಂಡು ಮತ್ತು **2** ಚೆಂಡು ಕೂಡಿದರೆ ____ ಚೆಂಡುಗಳು

$6 + 2 = \square$



$7 + 1 = \square$



## ಎಣಿಸೋಣ

A. ನಿಮ್ಮ ತಂದೆ ತಾಯಿಗಳಿಗೆ ಒಟ್ಟು ಎಷ್ಟು ಸಹೋದರ ಸಹೋದರಿಯರು ಇದ್ದಾರೆ?

B. ನಿನ್ನ ಮತ್ತು ನಿನ್ನ ಗೆಳೆಯನ ಮನೆಯಲ್ಲಿ ಒಟ್ಟು ಎಷ್ಟು ಸದಸ್ಯರು ಇದ್ದಾರೆ ?

C. ನಿನ್ನ ಕೈಕಾಲುಗಳಲ್ಲಿ ಒಟ್ಟು ಎಷ್ಟು ಬೆರಳುಗಳು ಇವೆ ?


D. ನಿನ್ನ ಬೆರಳುಗಳ ನೆರವಿನಿಂದ ಎಷ್ಟು ಸಂಖ್ಯೆಗಳನ್ನು ಎಣಿಸಬಲ್ಲೆ ?

ಕೂಡುವ ವಾಕ್ಯಗಳನ್ನು ಅರ್ಥ ಮಾಡಿಕೊಂಡು ಗಟ್ಟಿಯಾಗಿ ಹೇಳಲು ಪ್ರೋತ್ಸಾಹಿಸಿ. ಉದಾಹರಣೆಗೆ: 4 ಮಕ್ಕಳು ಮತ್ತು 2 ಮಕ್ಕಳು ಒಟ್ಟು ಕೂಡಿದರೆ 6 ಮಕ್ಕಳು. ಹಾಗೂ ಕೂಡು ಎಂಬ ಪದದ ಜೊತೆ ಪ್ಲಸ್ (+) ಚಿನ್ಹೆ ಬೆಸೆಯುವಂತೆ ಹೇಳಿಕೊಡಿ. ಅದೇ ರೀತಿ ಸಮ ಅಥವಾ ಒಟ್ಟಿಗೆ (ಈಕ್ವಲ್ಸ್) ಎಂಬ ಪದಕ್ಕೂ (=) ಚಿನ್ಹೆಗೂ ಸಂಬಂಧ ಬೆಸೆಯಿರಿ. ಗಣಿತದಲ್ಲಿ ಈ ಚಿಹ್ನೆಗಳನ್ನು ಬಳಸುವ ಮುನ್ನ, ಮಕ್ಕಳಿಗೆ ಕೂಡು, ಸಮ, ಮೊತ್ತ ಒಟ್ಟು ಎಂಬ ಪದಗಳು ಮನದಟ್ಟಾಗುವಂತೆ ಬಳಸುವ ಭೌತಿಕ ಅವಕಾಶಗಳನ್ನು ಕಲ್ಪಿಸಿ.




© NCERT not to be republished


## ಎಣಿಸಿ , ಕೂಡಿಸಿ ಒಟ್ಟು ಬೆರಳುಗಳಷ್ಟು ಬರೆಯಿರಿ




4 + 3 = ☐




3 + 2 = ☐



5 + 3 = ☐



4 + 0 = ☐





4 + 4 = ☐



## ಆಡೋಣ– ದಾಳದೊಂದಿಗೆ ಕೂಡೋಣ

ಒಬ್ಬರ ನಂತರ ಒಬ್ಬರು ಸರದಿಯಂತೆ ದಾಳಗಳನ್ನು ಹಾಕಿ ಅವುಗಳ ಮೇಲಿನ ಚುಕ್ಕೆಗಳನ್ನು ಎಣಿಸಿ ಯಾರು ಉರುಳಿಸಿದ ದಾಳಗಳಲ್ಲಿ ಹೆಚ್ಚು ಚುಕ್ಕೆಗಳು ಬಂದವು ನೋಡಿ.





© NCERT not to be republished




## ಮಾಡೋಣ

ಕಿಶೋರ್ ಮತ್ತು ನಿತ್ಯಾ ಇಬ್ಬರೂ ಅದೇ ಆಟವನ್ನು ಆಡಿದರು. ಅವರು ಉರುಳಿಸಿದ ದಾಳಗಳ ಮೇಲಿನ ಚುಕ್ಕೆಗಳು ಈ ರೀತಿ ಇವೆ. ಕಿಶೋರ್ ಎಷ್ಟು ಬಾರಿ ಗೆದ್ದ ನಿತ್ಯಾ ಎಷ್ಟು ಬಾರಿ ಗೆದ್ದಳು ಎಂಬುದನ್ನು ಅವರ ಹೆಸರುಗಳ ಕೆಳಗೆ ಸರಿ ಗುರುತು (✓) ಹಾಕಿ ತೋರಿಸಿ.



| | ಕಿಶೋರ್ | ನಿತ್ಯಾ |
|---|---|---|
| A. | ✓ | |
| B. | | |
| C. | | |
| D. | | |
| E. | | |







## ಮಣಿಗಳು ಮತ್ತು ದಾರ

ಕೆಳಗೆ ನೀಡಿರುವ ಸಂಖ್ಯೆಗಳ ಪ್ರಕಾರ ಸ್ಟ್ರಿಂಗ್‌ನಲ್ಲಿರುವ ಮಣಿಗಳನ್ನು ಬಣ್ಣ ಮಾಡಿ ಮತ್ತು ಬಣ್ಣದ ಮಣಿಗಳ ಒಟ್ಟು ಸಂಖ್ಯೆಯನ್ನು ಕಂಡುಹಿಡಿಯಿರಿ.


A. 3 + 4 = ____




B. 4 + 2 = ____




C. 5 + 4 = ____



D. 2 + 7 = ____



E. 7 + 3 = ____



ಕೊಟ್ಟಿರುವ ಸಂಖ್ಯೆಗಳನ್ನು ಕೂಡಿ ಒಟ್ಟು ಅಷ್ಟು ಸಂಖ್ಯೆಯ ಮಣಿಗಳಿಗೆ ಬಣ್ಣ ತುಂಬಿ ಮಕ್ಕಳಿಗೆ ದಾರ ಮತ್ತು ಮಣಿಗಳೊಂದಿಗೆ ಆಡಲು ಬಿಡಿ. ಕೂಡುವ ಕ್ರಿಯೆಗೆ ಗಮನ ಕೊಡಿ ಹೇಗೆ ಕೂಡುತ್ತಾರೆ ಎಂದು ಚರ್ಚಿಸಿ




© NCERT not to be republished

## ಜಿಗಿಯಿರಿ ಕೂಡಿರಿ


4 + 2 =





3 + 2 =




5 + 3 =




6 + 3 =




© NCERT not to be republished

## ನಿಮ್ಮದೇ ರೀತಿ ಕೂಡಿರಿ

ಅಭಿಲಾಶ್ ಮತ್ತು ರಾಣಿ ಎರಡು ವಿಭಿನ್ನ ರೀತಿಗಳಲ್ಲಿ ಸಂಖ್ಯೆಗಳನ್ನು ಕೂಡುತ್ತಿದ್ದಾರೆ ಕೂಡಲು ನೆರವಾಗಿ.




| | |
|---|---|
| $\begin{array}{r} 2 \\ +\ 3 \\ \hline \square \end{array}$ | $2 + 3 = \square$ |
| $\begin{array}{r} 5 \\ +\ 1 \\ \hline \square \end{array}$ | $5 + 1 = \square$ |
| $\begin{array}{r} 3 \\ +\ 3 \\ \hline \square \end{array}$ | $3 + 3 = \square$ |
| $\begin{array}{r} 9 \\ +\ 1 \\ \hline \square \end{array}$ | $9 + 1 = \square$ |


© NCERT not to be republished





## ಮಾಡೋಣ

A. ಸಂಖ್ಯೆ ಜೊತೆಗಳನ್ನು ತುಂಬಿ




ಕೋನಾರ್ಕ್ ಸೂರ್ಯ ರಥದಲ್ಲಿ ಚಕ್ರ

B. ಕೂಡಿ ಮತ್ತು ಹೊಂದಿಸಿ ಬರೆಯಿರಿ


| | | |
|---|---|---|
| 1 + 4 | 5 | 4 + 2 |
| 6 + 3 | 6 | 3 + 4 |
| 5 + 2 | 7 | 3 + 2 |
| 0 + 6 | 9 | 5 + 4 |



## ನಿಯೋಜಿತ ಕೆಲಸ



ಸೊನ್ನೆಯಿಂದ ಒಂಬತ್ತರವರೆಗೆ 10 ಬಿಲ್ಲೆಗಳನ್ನು ತೆಗೆದುಕೊಂಡು ಯಾವ ಎರಡು ಅಥವಾ ಮೂರು ಬಿಲ್ಲೆಗಳನ್ನು ಕೂಡಿದರೂ ಒಟ್ಟು ಒಂಬತ್ತು ಬರುವಂತೆ ಬಿಲ್ಲೆಗಳನ್ನು ಜೋಡಿಸಿ. ಇದನ್ನು ಮಾಡಲು ಅನೇಕ ದಾರಿಗಳಿವೆ. ನೀನು ಎಷ್ಟು ವಿಧಗಳಲ್ಲಿ ಮಾಡಬಲ್ಲೆ?






© NCERT not to be republished

## ಕೂಡುವ ಕಥೆ

A. ರಾಘವನ ಬಳಿ ನಾಲ್ಕು  ಚಿಪ್ಪುಗಳಿವೆ ಸರಿತಾ ಬಳಿ  5 ಚಿಪ್ಪುಗಳಿವೆ  ಅವರಿಬ್ಬರ  ಬಳಿ ಒಟ್ಟು ಎಷ್ಟು ಚಿಪ್ಪುಗಳಿವೆ? ☐

B. ರಂಜಿತಳ  ಬಳಿ ಮೂರು ಗೋಲಿಗಳಿವೆ . ಮೀನಾಕ್ಷಿ ಬಳಿ 6 ಗೋಲಿಗಳಿವೆ ಅವರಿಬ್ಬರ ಬಳಿ ಒಟ್ಟು ಎಷ್ಟು ಗೋಲಿಗಳಿವೆ? ☐

C. ಒಂದು ಚೀಲದಲ್ಲಿ  ಮೂರು ತೆಂಗಿನಕಾಯಿಗಳಿವೆ  ಇನ್ನೊಂದು ಚೀಲದಲ್ಲಿ ನಾಲ್ಕು ತೆಂಗಿನಕಾಯಿಗಳು ಇವೆ ಒಟ್ಟು ಎಷ್ಟಿದೆ? ☐

## ನಮ್ಮ ಚೀಲಗಳಲ್ಲಿ ಏನಿದೆ ನೋಡೋಣ

ನಿಮ್ಮ ಗೆಳೆಯರೊಂದಿಗೆ ಮಾಡಿ ಉತ್ತರವನ್ನು ಕೆಳಗೆ ಬರೆಯಿರಿ

A. ನನ್ನ ಚೀಲದಲ್ಲಿ ____ ಪುಸ್ತಕಗಳಿವೆ. ನನ್ನ  ಗೆಳೆಯನ ಬಳಿ ____ ಪುಸ್ತಕ ಇವೆ. ನಮ್ಮಿಬ್ಬರ ಬಳಿ ಒಟ್ಟು ________ ಪುಸ್ತಕಗಳಿವೆ.


B. ನನ್ನ ಬಳಿ ____ ಪೆನ್ಸಿಲ್ ಗಳಿವೆ. ನನ್ನ ಗೆಳೆಯನ ಬಳಿ ____ ಪೆನ್ಸಿಲ್ ಗಳಿವೆ. ಒಟ್ಟು ನಮ್ಮಿಬ್ಬರ ಬಳಿ _______ ಪೆನ್ಸಿಲ್ ಗಳಿವೆ

C. ನನ್ನ ಬಳಿ ____ ಪಠ್ಯಪುಸ್ತಕಗಳಿವೆ. ನನ್ನ ಗೆಳೆಯನ ಬಳಿ ____ ಪಠ್ಯಪುಸ್ತಕಗಳಿವೆ. ಒಟ್ಟು ನಮ್ಮಿಬ್ಬರ ಬಳಿ _______ ಪಠ್ಯಪುಸ್ತಕಗಳಿವೆ.



## ಯೋಚಿಸಿ ಮಾಡು

ಕೊಟ್ಟಿರುವ ಕೋಷ್ಟಕದಲ್ಲಿ 1, 2, 3 ಸಂಖ್ಯೆಗಳನ್ನು ತುಂಬಿ, ಯಾವ ದಿಕ್ಕಿನಲ್ಲಿ ಕೂಡಿದರೂ 6 ಬರುವಂತೆ ಸಂಖ್ಯೆಗಳನ್ನು ತುಂಬಿ.





ಈ ಚಟುವಟಿಕೆಯನ್ನು ಇಬ್ಬರು ಒಟ್ಟಿಗೆ ಮಾಡಲಿ ಮಕ್ಕಳು ಈ ರೀತಿಯ ಸಮಸ್ಯೆಗಳನ್ನು ತಾವೇ ಮಾಡಲು ಉತ್ತೇಜಿಸಿ, ತರಗತಿಯಲ್ಲಿ ಒರಿಸ್ಸಾದಲ್ಲಿರುವ ಪ್ರಪಂಚದ ಅತ್ಯಂತ ಪ್ರಾಚೀನ ದೇವಾಲಯವಾದ ಕೋನಾರ್ಕದ ಸೂರ್ಯ ದೇಗುಲದ ಬಗ್ಗೆ ಚರ್ಚಿಸಿ. ಪುಟ 56ರಲ್ಲಿ ಚಿತ್ರವಿದೆ ಸೂರ್ಯನ ರಥದ ಚಕ್ರವನ್ನ ತೋರಿಸಿ ಚರ್ಚಿಸಿ.



© NCERT not to be republished

# ಐದು ಪುಟ್ಟ ಮಕ್ಕಳು

ಐದು ಪುಟ್ಟ ಮಕ್ಕಳು
ಎತ್ತಿ ನಿಮ್ಮ ಕೈಗಳು
ಬಂತು ನಿಮ್ಮ ನಿಲುಗಡೆ
ಒಬ್ಬ ಇಳಿದ ನಂತರ
ಉಳಿದ ಮಂದಿ ನಾಲ್ಕು !







ಎತ್ತಿ ನಿಮ್ಮ ಕೈಗಳು
ಬಂತು ನಿಮ್ಮ ನಿಲುಗಡೆ
ಮರದ ಬಳಿ ಇಳಿದನೊಬ್ಬ
ಮೂರು ಮಂದಿ ಉಳಿದರು!




ಮೂರು ಪುಟ್ಟ ಮಕ್ಕಳು
ಎತ್ತಿ ನಿಮ್ಮ ಕೈಗಳು
ಬಂತು ನಿಮ್ಮ ನಿಲುಗಡೆ
ಇಳಿದನೊಬ್ಬ ಅಬ್ಬರದಿ
ಉಳಿದ ರಿವರು ಇಬ್ಬರು!

© NCERT not to be republished

ಪುಟ್ಟ ಮಕ್ಕಳಿಬ್ಬರು
ಎತ್ತಿ ನಿಮ್ಮ ಕೈಗಳು
ಬಂತು ನಿಮ್ಮ ನಿಲುಗಡೆ
ಇಳಿದು ಹೋದನೊಬ್ಬನು
ಉಳಿದ ಹುಡುಗ ಒಬ್ಬನೇ!







ಉಳಿದ ಒಬ್ಬ ಕಂದನೆ
ಎತ್ತು ನಿನ್ನ ಕೈಯನೇ
ಕೊನೆಯ ನೀನು ಇಳಿದ
ಬಳಿಕ ಉಳಿಯಲಿಲ್ಲ ಒಬ್ಬರೂ!

## ಮಾತಾಡೋಣ

A. ಬಸ್ಸು ಹೊರಟಾಗ ಎಷ್ಟು ಜನ ಮಕ್ಕಳಿದ್ದರು ?
B. ಮೊದಲ ನಿಲುಗಡೆಯಲ್ಲಿ ಎಷ್ಟು ಮಕ್ಕಳು ಇಳಿದರು
C. ಮೊದಲ ನಿಲುಗಡೆ ಆದಮೇಲೆ ಬಸ್ಸಿನಲ್ಲಿ ಎಷ್ಟು ಮಕ್ಕಳು ಉಳಿದಿದ್ದರು?
D. ಎರಡನೆಯ ನಿಲ್ದಾಣ ಆದಮೇಲೆ ಬಸ್ಸಿನಲ್ಲಿ ಎಷ್ಟು ಮಕ್ಕಳಿದ್ದರು? ಇದೇ ರೀತಿ ಮೂರು ನಾಲ್ಕು ಐದು ನಿಲ್ದಾಣಗಳು ಆದಮೇಲೆ ಉತ್ತರಿಸಿ
E. ಕೊನೆಯಲ್ಲಿ ಎಷ್ಟು ಜನ ಮಕ್ಕಳು ಬಸ್ಸಿನಲ್ಲಿ ಉಳಿದಿದ್ದರು?

## ಯೋಜಿತ ಕೆಲಸ

ನಿಮ್ಮ ಮನೆಯಲ್ಲಿ ಎಷ್ಟು ಜನ ಇದ್ದಾರೆ? ಎಷ್ಟು ಜನ ಶಾಲೆಗೆ ಹೋಗುತ್ತಾರೆ? ಎಷ್ಟು ಜನ ಕೆಲಸಕ್ಕೆ ಹೋಗುತ್ತಾರೆ? ಎಷ್ಟು ಜನ ಮನೆಯಲ್ಲಿ ಇರುತ್ತಾರೆ?




© NCERT not to be republished

## ಮಾಡೋಣ

### ಎಷ್ಟು ಉಳಿದಿವೆ

A. ಬಿಟ್ಟ ಜಾಗ ತುಂಬಿ

i.

6 ಕಪ್ಪೆಗಳು     2 ಜಿಗಿದು ಹೋದವು     ______ ಉಳಿದವು

6 – 2 = ______

ii.








7 ಬಲೂನುಗಳು     ______ ಹಾರಿ ಹೋದವು     5 ಉಳಿದವು

7 – 2 = ______

iii.

9 ಬಾಳೆಹಣ್ಣು     6 ತೆಗೆದುಕೊಂಡು ಹೋಯಿತು     ____ ಉಳಿಯಿತು

9 – 6 = ______

© NCERT not to be republished

B. ಬಿಟ್ಟುಹೋದ ಚಿತ್ರಗಳನ್ನು ಬರೆಯಿರಿ ಬಿಟ್ಟ ಜಾಗ ತುಂಬಿ

i.



____ ಕುಂಡಗಳು ____ ಒಡೆದವು ____ ಉಳಿಯಿತು

3 – ______ = ______

ii.



7 ಲಾಡುಗಳು 4 ತಿಂದದ್ದು ____ ಉಳಿದದ್ದು

7 – 4 = ______


iii.



7 ಚೆಂಡುಗಳು ______ತೆಗೆದುಕೊಂಡು ಹೋದದ್ದು ______ಉಳಿದದ್ದು

7 – ______ = ______

C. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ


i. ನಿಶಾ ಬಳಿ  9 ಬಾಳೆಹಣ್ಣುಗಳು ಇವೆ.  . ಅವಳು ಮೂರು ತಿನ್ನುತ್ತಾಳೆ. ಎಷ್ಟು ಬಾಳೆಹಣ್ಣುಗಳು ಉಳಿಯುತ್ತವೆ? [ ]

ii. ಹೂಗಳ ಮೇಲೆ  ಎಂಟು ಚಿಟ್ಟೆಗಳಿವೆ, ಅದರಲ್ಲಿ ಐದು ಹಾರಿ ಹೋಗುತ್ತವೆ ಉಳಿದ ಚಿಟ್ಟೆಗಳು ಎಷ್ಟು? [ ]





© NCERT not to be republished

## ಮಾಡೋಣ

10 ಚುಕ್ಕೆಗಳ ಒಂದು ಬಿಲ್ಲೆ ಮಾಡಿ ಅದರಲ್ಲಿ ಕೆಲವನ್ನು ಕೈಯಿಂದ ಮರೆಮಾಡಿ ಎಷ್ಟು ಚುಕ್ಕೆಗಳು ಮರೆಯಾಗಿವೆ ಎಂದು ನಿಮ್ಮ ಗೆಳೆಯರನ್ನು ಕೇಳಿ



**ಎಷ್ಟು ಚುಕ್ಕೆಗಳು ಮರೆಯಾಗಿವೆ, ಎಷ್ಟು ಕಾಣುತ್ತವೆ?**


| ಒಟ್ಟು ಚುಕ್ಕಿಗಳು10 | ಮರೆಯಾದವು | ಕಾಣುವುದು |
|---|---|---|
|  | 0 | 10 |
|  | | |
|  | | |
|  | | |

## ನಿಯೋಜಿತ ಕೆಲಸ


ಎಂಟು ಚುಕ್ಕೆಗಳ ಒಂದು ಚೌಕ ಮಾಡಲು ಹೇಳಿ ಕೈ ಬಳಸಿ ಕೆಲವು ಚುಕ್ಕೆಗಳನ್ನು ಮರೆಮಾಡಲಿ ಎಷ್ಟು ಮರೆಯಾಗಿವೆ ಎಷ್ಟು ಕಾಣುತ್ತದೆ ನೋಡಲಿ ಇದೇ ರೀತಿ ಉಳಿದ ಸಂಖ್ಯೆಗಳ ಚುಕ್ಕೆಗಳನ್ನು ಮಾಡಲಿ. ಚುಕ್ಕೆಗಳನ್ನು ಮರೆ ಮಾಡದೆ ಹೀಗೆ ಮಾಡಲು ಸಾಧ್ಯವೇ?

© NCERT not to be republished

## ನಂಬರ್ ಸ್ಟ್ರಿಪ್ ಮೇಲೆ ಹಿಮ್ಮುಖವಾಗಿ ಹಾಪ್ ಮಾಡಿ.





A. 9 ರಿಂದ 3 ಹೆಜ್ಜೆ ಹಿಂದಕ್ಕೆ ಹೋಗು.




9 – 3 = 6

B. 7 ರಿಂದ 4 ಹೆಜ್ಜೆ ಹಿಂದಕ್ಕೆ ಹೋಗು.




7 – 4 =

## ವ್ಯವಕಲನವನ್ನು ನಿಮ್ಮದೇ ಆದ ರೀತಿಯಲ್ಲಿ ಮಾಡಿ.

A. 8 – 2 =

B. 7 – 3 =

C. 9 – 5 =

D. 6 – 3 =

E. 5 – 1 =

F. 4 – 2 =

© NCERT not to be republished